# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ

# ಒಳ್ಳೇಯ ಸಮಾರ್ಯದವನು



ಬರಹಗಾರರು: Edward Hughes

ಚಿತ್ರಲೇಖಕರು: M. Maillot; Lazarus

ಅಳವಡಿಸುವವರು: Ruth Klassen; Sarah S.

ಪದ್ಮಾ ಸೈಲೇಸ್: Vinay Shirol



ತಯಾರಕರು: Bible for Children
www.M1914.org



©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಒಬ್ಬ ನ್ಯಾಯಾಧಿಪತಿಯು ಯೇಸುವಿಗೇ ಈ ರೀತಿಯಾಗಿ ಪ್ರಶ್ನೆಯನ್ನು ಕೇಳಿದನು, ಗುರುವೇ ನಿತ್ಯಜೀವವನ್ನು ಪಡೆಯುವುದಕ್ಕೆ ಏನನ್ನು ಮಾಡಬೇಕು?

ಯೇಸು ಅದಕ್ಕೆ ಪ್ರತಿಕ್ರಿಯೆ ನೀಡಿದ್ದನೆಂದರೆ.

ಧರ್ಮಶಾಸ್ತ್ರವು ಏನನ್ನು ಹೇಳುತ್ತದೆ ಎಂದನು.



‘ದೇವರನ್ನು ಮತ್ತು ನಿನ್ನ
ನೆರೆಯವರನ್ನು ಪ್ರೀತಿಸು’
ಎಂದು ಹೇಳಿದನು, ‘ನನ್ನ
ನೆರೆಯವವರು ಯಾರು?’
ಎಂದು ಆತನು
ಕೇಳಿದನು?



ಯೇಸು ಆ ಮನುಷ್ಯನ ಪ್ರಶ್ನೆಯನ್ನು ಉತ್ತರರಿಸಲು ಕಥೆಯನ್ನು ಹೇಳಿದನು. ಅದೆನೆಂದರೆ, ಒಬ್ಬ ಮನುಷ್ಯನು ಯೇರುಸಲೇಮ್ ನಿಂದ ಯೆರಿಕೋಗೆ ಪ್ರಯಾಣ ಮಾಡುತ್ತಿದ್ದವನು. ಅವನು ಕಳ್ಳರಿಂದ ಹಿಡಿಯಲ್ಪಟ್ಟನು.



ಆ ಕಳ್ಳನು ಎಲ್ಲವನ್ನು ತಕ್ಕೊಂಡು ಕೊನೆಗೆ ಆತನ
ಬಟ್ಟೆಯನ್ನು ತಗೆದುಕೊಂಡು ಹೋದನು.



ಅವನಿಗೆ ಚನ್ನಾಗಿ ಗಾಯವಾಗುವಷ್ಟು ಹೊಡೆದು
ಅರೆ ಜೀವಮಾಡಿ ಅವನನ್ನು ರಸ್ತೆಯ ಬದಿಯಲ್ಲಿ
ಬಿಟ್ಟು ಹೋದನು.




ಆ ದಾರಿಯಲ್ಲಿ ಒಬ್ಬ ಯಾಜಕನು
ಬಂದನು, ಅವನು ಅವನಿಗೆ
ಸಹಾಯ ಮಾಡಬಹುದಿತ್ತು.

ಆತನು ಹಾಗೆ ಮಾಡದೆ ಆತನ
ರಕ್ತ ಸೊರುವುದನ್ನು ಕಂಡು ಬೇರೆ
ರಸ್ತೆಯಿಂದ ಓರೆಯಾಗಿ ಹೋದನು.



ಮತ್ತು ಒಬ್ಬ ಲೇವಿಯನು ಆ ಮಾರ್ಗವಾಗಿ ಬಂದನು,
ಅವನು ದೇವಾಲಯದಲ್ಲಿ ಯಾಜಕರಿಗೆ ಸಹಾಯ
ಮಾಡುವವನಾಗಿದ್ದನು.



ಆ ನೋವಿಂದ ತುಂಬಿದ ಮನುಷ್ಯನನ್ನು ನೋಡಿ
ಸಹಾಯ ಮಾಡೆದೆ ಒರೆಯಾಗಿ ಹೋದನು.



ಕೊನೆಗೆ ಸಮಾರ್ಯದವನು ಬಂದನು ಯಹೂದ್ಯರು ಸಮಾರ್ಯದವರನ್ನು ಯಾವಾಗಲೂ ತಿರಸ್ಕರಿಸುತ್ತಿದ್ದರು.



ಈ ಕತೆಯನ್ನು ಕೇಳುವಂತ ಜನರು ಆ ಸಮಾರ್ಯದವನು
ಕಥೆಯ ನಾಯಕನಾಗುತ್ತಾನೆಂದು ಅವರು ನೆನಸಿರಲಿಲ್ಲ ಆದರೆ
ಅವನು ಆತನಿಗೆ ಸಹಾಯ ಮಾಡಲು ಇಚ್ಚೆಸಿದನು.



ಆ ಸಮಾರ್ಯದವನು ಬಗ್ಗಿ
ಅವನ ಗಾಯಗಳನ್ನು ಒರಸಿ
ಅದಕ್ಕೆ ಔಷದಿ ಹಚ್ಚಿ ತನ್ನ ಕತ್ತೆ
ಮೇಲೆ ಹೇರಿಸಿಕೊಂಡು
ಹೋದನು.



ಇಡಿ ರಾತ್ರಿ ಆ ಸಮಾರ್ಯದವನು ಅವನನ್ನು
ನೋಡಿಕೊಂಡನು.



ಬೆಳಗಾದ ಮೇಲೆ ಅವನನ್ನು ಆ ವೈದ್ಯನಿಗೆ ಒಪ್ಪಿಸಿ
ಈತನನ್ನು ಚನ್ನಾಗಿ ನೋಡಿಕೊ ಎಂದು ಹೇಳಿದನು.



ಕತೆ ಮುಗಿಯುತು, ಯೇಸು ಕೇಳಿದರು "ಈಗ ಯಾರು
ಆ ಗಾಯ ಗೊಂಡವನಿಗೆ ಆಕ್ಕ ಪಕ್ಕದವನು?"





ಆ ವಕೀಲನು
ಉತ್ತರಿಸಿದೆನೆಂದರೆ,
ಆ ಕರುಣೆಯುಳ್ಳ ಆ
ಸಮಾರ್ಯದವನೇ
ಗಾಯ ಗೊಂಡವನಿಗೆ
ಆಕ್ಕ ಪಕ್ಕದವನು.


ಯೇಸು ಹೇಳಿದ್ದು; ‘ನೀನು
ಹೋಗಿ ಅವನಂತೆ ಮಾಡು
ನಿನ್ನ ನೆರೆಯವರಿಗೆ ಏನಾದರೂ
ಅವಶ್ಯವಿದ್ದರೆ ಹೋಗಿ ಅವರಿಗೆ
ಸಹಾಯಮಾಡು’ ಅಂದನು.
ನಾವು ಕಷ್ಟದಲ್ಲಿರುವವರಿಗೆ
ಸಹಾಯಮಾಡುವುದಾದರೆ
ಅದು ದೇವರಿಗೆ
ಮೆಚ್ಚಿಗೆಯಾಗುತ್ತದೆ.

ಒಳ್ಳೇಯ ಸಮಾರ್ಯದವನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಲೂಕ 10

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16